ದಿನಾಂಕ: 24.01.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಟಿ ಎಸ್ ಜಿ., ವಕೀಲರಿಂದಃ**

ನನ್ನ ತಂದೆ ನರಸಿಂಹಪ್ಪರವರಿಗೆ 4 ಜನ ಹೆಣ್ಣುಮಕ್ಕಳು 2 ಗಂಡುಮಕ್ಕಳು ಎಂದರೆ ಸರಿ. ಗಂಗಮ್ಮ, ಕಮಲಮ್ಮ, ಶಾರದಮ್ಮ , ಸಾವಿತ್ರಮ್ಮ ತಿಪ್ಪೇಸ್ವಾಮಿ ನಾನು ಪ್ರಕಾಶ್ ನರಸಿಂಹಪ್ಪನ ಮಕ್ಕಳೆಂದರೆ ಎಂದರೆ ಸರಿ. ವಾದಿ ಸೌಜನ್ಯ ಮತ್ತು ರಾಘವೇಂದ್ರ ನನ್ನ ಅಣ್ಣ ತಿಪ್ಪೇಸ್ವಾಮಿಯ ಮಕ್ಕಳೆಂದರೆ ಎಂದರೆ ಸರಿ. ವೀಣಾಕ್ಷಿ ನನ್ನ ಅತ್ತಿಗೆ ಎಂದರೆ ಸರಿ. ವೀಣಾಕ್ಷಿ ಇವರು ಗಂಗಮ್ಮ ಮಗಳು ಎಂದರೆ ಸರಿ. ಓಎಸ್ ನಂ.57/2014 ರ ವಾದ ಪತ್ರ ಅಂಶವನ್ನು ತಿಳಿದುಕೊಂಡಿರುತ್ತೇನೆ. ಕೇಸ್ ಹಾಕಿದ ನಂತರ ವಾದಿಯರು ದಾವಾ ಆಸ್ತಿಗಳನ್ನು ಮಾರಾಟ ಮಾಡಬಾರದೆಂದು ನಿರ್ಭಂದಕ ಆದೇಶವನ್ನು ಪಡೆದುಕೊಂಡರೆಂದರೆ ನನಗೆ ಗೊತ್ತಿರುವುದಿಲ್ಲ. ಈ ಕೇಸ್ ಹಾಕಿದ 6 ತಿಂಗಳ ನಂತರ ನಾನು ಓಎಸ್ ನಂ.10/2015 ನನ್ನ ತಂದೆ ನರಸಿಂಹಪ್ಪ ಮತ್ತು ತಿಪ್ಪೇಸ್ವಾಮಿ ಮತ್ತು ಹೆಣ್ಣುಮಕ್ಕಳ ವಿರುದ್ಧ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ.

ಆ ದಾವೆಯಲ್ಲಿ ಗಂಗಮ್ಮ ಇವರನ್ನು ಪಕ್ಷಕಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ನಾನು ಭಾಗ ಕೋರಿ ದಾವೆ ಸಲ್ಲಿಸಿರುತ್ತೇನೆ. ಆ ದಾವೆಯಲ್ಲಿ ಕೂಡಾ ದಾವಾ ಆಸ್ತಿಯನ್ನು ಮಾರಾಟ ಮಾಡಬಾರದೆಂದು ನಿರ್ಭಂದಕ ಆದೇಶವನ್ನು ಕೋರಿದೆನೆಂದರೆ ಸರಿಯಲ್ಲ. 17.04.2015 ರಲ್ಲಿ ಐಟಂ ನಂ.1 ರಲ್ಲಿ 12 ಎಕರೆ 33 ಗುಂಟೆ ಆಸ್ತಿಯನ್ನು ನಾನು ತಂದೆ, ತಾಯಿ, ಅಣ್ಣ ಮತ್ತು 3 ಜನ ಸಹೋದರಿಯವರು ಸೇರಿ ಮಾರಾಟ ಮಾಡಿದ್ದೇವೆ ಎಂದರೆ ಸರಿ. ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಆಸ್ತಿಯನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

ನನ್ನ ತಂದೆ ಯಾವ ಹಣಕಾಸಿನ ಅಡಚಣೆಗಾಗಿ ಆಸ್ತಿಯನ್ನು ಮಾರಾಟ ಮಾಡಿದರೆಂದು ತೋರಿಸಲು ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಕೈಸಾಲ ಮಾಡಿದ್ದು ಎಂದು ಹೇಳುತ್ತಾರೆ. ಆ ಕ್ರಯಪತ್ರಕ್ಕೆನನ್ನ ದೊಡ್ಡ ಅಕ್ಕ ಗಂಗಮ್ಮ ಸಹಿ ಮಾಡಿಲ್ಲ ಎಂದರೆ ಸರಿ. . ಆರ್ ಎ ನಂ .14/1970 ರ ವಿಚಾರವನ್ನು ನನ್ನ ವಾದ ಪತ್ರದಲ್ಲಾಗಲಿ, ಓಎಸ್ ನಂ.57/2014 ರ ಪ್ರತಿವಾದ ಪತ್ರದಲ್ಲಾಗಲಿ ಹೇಳಿರುವುದಿಲ್ಲ, ಸಾಕ್ಷಿಯು ಮುಂದುವರೆದು ಆ ದಾಖಲಾತಿಗಳು ಆ ಸಮಯದಲ್ಲಿ ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ. ಆ ದಾಖಲಾತಿಗಳು ಹೋದ ತಿಂಗಳು ಸಿಕ್ಕಿರುತ್ತವೆ, ನಾನೇ ಅರ್ಜಿ ಸಲ್ಲಿಸಿ ತೆಗೆದುಕೊಂಡಿರುತ್ತೇನೆ. ಈರಮ್ಮ, ನರಸಮ್ಮ ಮತ್ತು ಕರಿಯಮ್ಮ ಮತ್ತು ಈರಮ್ಮ ಮಕ್ಕಳು ನರಸಿಂಹಪ್ಪ, ಕರಿಯಪ್ಪ ಮತ್ತು ವೀರಜುಂಜಪ್ಪ ಇವರ ಮಧ್ಯೆರಾಜಿ ಆಗಿರುತ್ತದೆ.

ಆರ್.ಎ. ನಂ.14/1970 ರ ಪಕ್ಷಕಾರರಿಗೂ ಈ ಕೇಸಿನ ಪಕ್ಷಕಾರರಿಗೂ ಯಾವುದೇ ರೀತಿಯಾದಂತಹ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಓಎಸ್ 10/2015 ರಲ್ಲಿ ತೋರಿಸಿರುವಂತಹ ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿಯು ಮಾರಾಟ ಮಾಡಿದ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದು ಹೇಳುತ್ತಾರೆ. ಐಟಂ ನಂ.1 ರ ಆಸ್ತಿಯನ್ನು ರಾಜಿ ಮುಖಾಂತರ ಖರೀದಿ ಮಾಡಿದ್ದಾಗಿರುತ್ತದೆ. ಈರಮ್ಮ, ನರಸಮ್ಮ, ಕರಿಯಮ್ಮ ಇವರು ವೀರಜುಂಜಪ್ಪ, ನರಸಿಂಹಪ್ಪ, ಕರಿಯಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ. ಕ್ರಯಪತ್ರವನ್ನು ಹಾಜರು ಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ರಾಜಿ ಪತ್ರ ಇದೆ ಎಂದು ಹೇಳುತ್ತಾರೆ. ದಾವೆಯಲ್ಲಿ ದಾವಾ ಆಸ್ತಿಗಳೆಲ್ಲವನ್ನು ನಾನು ಪಿತ್ರಾರ್ಜಿತ ಆಸ್ತಿ ಎಂದು ಹೇಳಿದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ನನ್ನಷ್ಟೆ ನನ್ನ ಅಣ್ಣಂದಿರಿಗೂ ಹಕ್ಕಿದೆ ಎಂದರೆ ಸರಿ. ನನ್ನ ಅಣ್ಣನ ಮಕ್ಕಳಿಗೂ ಕೂಡಾ ಆಸ್ತಿಯಲ್ಲಿ ಸಮಾನದ ಹಕ್ಕಿದೆ ಎಂದರೆ ಸರಿ. ಅಣ್ಣನ ಮಕ್ಕಳು ಅಂದರೆ ವಾದಿಗಳಿಗೆ ಹಕ್ಕು ಸಿಗಬಾರದೆಂದು ಓಎಸ್ ನಂ. 57/2014 ನ್ನು ಸಲ್ಲಿಸಿದ ನಂತರ ಓಎಸ್ ನಂ. 10/2015 ಸಲ್ಲಿಸಿದೆ ಎಂದರೆ ಸರಿಯಲ್ಲ. ವಿಲ್ ನಾವೆಯ ಬಗ್ಗೆ ಪ್ರಬೇಟನ್ನು ಪಡೆದಿರುವುದಿಲ್ಲ. ದಿಃ 29.09.2016 ರಂದು ವಿಲ್ ನ್ನು ಮಾಡಿರುತ್ತಾರೆ. ನನ್ನ ತಂದೆ 2022 ರಲ್ಲಿ ತೀರಿಕೊಂಡಿರುತ್ತಾರೆ. ಈ ಕೇಸ್ ಹಾಕಿದ ನಂತರ ವಿಲ್ ನಾಮೆಯ ದಿನಾಂಕ ಇರುವುದರಿಂದ ಆ ದಾಖಲಾತಿಯ ಆಧಾರದ ಮೇಲೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು